# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಎಂ ನಾಗರಾಜು
(ವಿಧಾನ ಸಭೆಯಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 265

ಉತ್ತರಿಸಬೇಕಾದ ದಿನಾಂಕ : 10-12-2024

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ನೋಂದಾಯಿಸಲಾದ ಸಹಕಾರ ಬ್ಯಾಂಕ್ ಮತ್ತು ಸಂಘಗಳೆಷ್ಟು; (ವಿವರಗಳನ್ನು ಒದಗಿಸುವುದು) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ಯಾವುದೇ ಸಹಕಾರ ಬ್ಯಾಂಕ್ ನೋಂದಣಿಯಾಗಿರುವುದಿಲ್ಲ.<br><br>ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ 2675 ಸಹಕಾರ ಸಂಘಗಳನ್ನು ನೋಂದಾಯಿಸಲಾಗಿರುತ್ತದೆ.<br><br>ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಆ) | ಆದಾಯ ತೆರಿಗೆಯ ಸೆಕ್ಷನ್ 80(ಪಿ) ಅಡಿಯಲ್ಲಿ ವಿನಾಯಿತಿಯನ್ನು ಹಿಂತೆಗೆದುಕೊಳ್ಳುವುದರಿಂದ ಹೆಚ್ಚಿನ ಸಹಕಾರ ಬ್ಯಾಂಕುಗಳು ಮತ್ತು ಸಂಘಗಳು ತೊಂದರೆಗಳನ್ನು ಎದುರಿಸುತ್ತಿವೆಯೇ; (ವಿವರಗಳನ್ನು ಒದಗಿಸುವುದು) | ಆದಾಯ ತೆರಿಗೆಯ ಸೆಕ್ಷನ್ 80P(2(a)(i) ಅಡಿಯಲ್ಲಿ ಸಹಕಾರ ಬ್ಯಾಂಕುಗಳಿಗೆ ನೀಡಿರುವ ತೆರಿಗೆ ವಿನಾಯ್ತಿಯನ್ನು 2007-08 ನೇ ಸಾಲಿನಿಂದ ಹಿಂತೆಗೆದುಕೊಂಡಿದೆ. ಆದರೆ, ಸಹಕಾರ ಸಂಘಗಳಿಗೆ ನೀಡಿರುವ ವಿನಾಯ್ತಿಯನ್ನು ಹಿಂತೆಗೆದುಕೊಂಡಿರುವುದಿಲ್ಲ.<br><br>ಸಹಕಾರ ಬ್ಯಾಂಕುಗಳಿಗೆ ಸೆಕ್ಷನ್ 80P(2(a)(i) ಅಡಿಯಲ್ಲಿ ನೀಡಿರುವ ವಿನಾಯ್ತಿಯನ್ನು ಹಿಂತೆಗೆದುಕೊಂಡಿರುವುದರಿಂದ ಸಹಕಾರ ಬ್ಯಾಂಕುಗಳು ಪ್ರತಿ ವರ್ಷ ಗಳಿಸಿದ ನಿವ್ವಳ ಲಾಭದಲ್ಲಿ ಆದಾಯ ತೆರಿಗೆಯನ್ನು |

| | | |
|---|---|---|
| | | ಪಾವತಿಸಬೇಕಾಗಿರುವುದರಿಂದ ಸಹಕಾರ ಬ್ಯಾಂಕುಗಳಿಗೆ ಆರ್ಥಿಕ ಹೊರೆಯಾಗಿದ್ದು ಇದರಿಂದ ಸಹಕಾರ ಬ್ಯಾಂಕುಗಳ ಸ್ವಂತ ಬಂಡವಾಳ ಹಾಗೂ ಸಂಪನ್ಮೂಲಗಳ ಕೊರತೆಯಾಗಿರುತ್ತದೆ. ಇದರಿಂದಾಗಿ ಸಹಕಾರ ಬ್ಯಾಂಕುಗಳ ದುಡಿಯುವ ಬಂಡವಾಳದ ಕೊರತೆಯಿಂದಾಗಿ ಸಹಕಾರ ಬ್ಯಾಂಕುಗಳ ವ್ಯವಹಾರ ಕುಂಠಿತವಾಗುತ್ತದೆ. |
| ಇ) | ಈ ನಿಟ್ಟಿನಲ್ಲಿ ನಷ್ಟದಲ್ಲಿರುವ ಸಹಕಾರ ಬ್ಯಾಂಕ್‌ಗಳು ಮತ್ತು ಸಂಘಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ರಾಜ್ಯದಲ್ಲಿ ನಷ್ಟದಲ್ಲಿರುವ ಸಹಕಾರ ಬ್ಯಾಂಕ್ ಮತ್ತು ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಪುನರುಜ್ಜೀವನಗೊಳಿಸಲು ಪ್ಯಾಕ್ಸ್‌ಗಳನ್ನು ವಿವಿಧೋದ್ದೇಶ ಸಹಕಾರ ಸಂಘಗಳಾಗಿ ಪರಿವರ್ತಿಸಲಾಗಿದೆ. ಸಹಕಾರ ಸಂಘಗಳಿಗೆ ಬಿಡಿಪಿ ಯೋಜನೆಯನ್ನು ಮತ್ತು ಬ್ಯಾಂಕುಗಳಿಗೆ ಡಿಪಿಪಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಪ್ಯಾಕ್ಸ್ ಮತ್ತು ಪಿಕಾರ್ಡ್ ಬ್ಯಾಂಕುಗಳ ಕಂಪ್ಯೂಟರೀಕರಣ ಯೋಜನೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಧನ ಸಹಾಯದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. |

**ಸಂಖ್ಯೆ: ಸಿಒ 96 ಪಿಎಂಸಿ 2024**

K. N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜುಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 168(265) ಕ್ಕೆ ಅನುಬಂಧ

| ಕ್ರ.ಸಂ | ಜಿಲ್ಲೆಯ ಹೆಸರು | ಕಳೆದ 03 ವರ್ಷಗಳಿಂದ ಇಲ್ಲಿಯವರೆಗೆನೋಂದಾಯಿಸಲಾದ ಸಹಕಾರ ಸಂಘಗಳ ಸಂಖ್ಯೆ |
|---|---|---|
| 1 | ಕಲಬುರಗಿ | 138 |
| 2 | ಬೀದರ | 27 |
| 3 | ಯಾದಗಿರಿ | 56 |
| 4 | ಬಳ್ಳಾರಿ | 100 |
| 5 | ರಾಯಚೂರು | 70 |
| 6 | ಕೊಪ್ಪಳ | 118 |
| 7 | ಬೆಳಗಾವಿ | 434 |
| 8 | ವಿಜಯಪುರ | 92 |
| 9 | ಬಾಗಲಕೋಟೆ | 184 |
| 10 | ಧಾರವಾಡ | 79 |
| 11 | ಗದಗ | 95 |
| 12 | ಹಾವೇರಿ | 108 |
| 13 | ಉತ್ತರ ಕನ್ನಡ | 69 |
| 14 | ಮೈಸೂರು | 156 |
| 15 | ಚಾಮರಾಜನಗರ | 24 |
| 16 | ಮಂಡ್ಯ | 49 |
| 17 | ಹಾಸನ | 191 |
| 18 | ಚಿಕ್ಕಮಗಳೂರು | 83 |
| 19 | ಕೊಡಗು | 14 |
| 20 | ದಕ್ಷಿಣ ಕನ್ನಡ | 35 |
| 21 | ಉಡುಪಿ | 17 |
| 22 | ಬೆಂಗಳೂರು 1ನೇ ವಲಯ | 37 |
| 23 | ಬೆಂಗಳೂರು 2 ನೇ ವಲಯ | 4 |
| 24 | ಬೆಂಗಳೂರು 3ನೇ ವಲಯ | 44 |
| 25 | ಬೆಂಗಳೂರು 4ನೇ ವಲಯ | 21 |
| 26 | ಬೆಂಗಳೂರು ಗ್ರಾ.ಜಿಲ್ಲೆ | 9 |
| 27 | ರಾಮನಗರ | 53 |
| 28 | ತುಮಕೂರು | 116 |
| 29 | ಕೋಲಾರ | 88 |
| 30 | ಚಿಕ್ಕಬಳ್ಳಾಪುರ | 30 |
| 31 | ಚಿತ್ರದುರ್ಗ | 66 |
| 32 | ದಾವಣಗೆರೆ | 68 |
| 33 | ಶಿವಮೊಗ್ಗ | 93 |
| | ಒಟ್ಟು | 2675 |

ಸಹಕಾರ ಸಂಘಗಳ ಅಪರ ನಿಬಂಧಕರು
(ಆಡಳಿತ)
ಸಹಕಾರ ಸಂಘಗಳ ನಿಬಂಧಕರ ಕಛೇರಿ
ನಂ. 1, ಅಲಿ ಅಸ್ಗರ್ ರಸ್ತೆ, ಬೆಂಗಳೂರು-52